**ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಜಮಖಂಡಿ**

ಸಿ.ಸಿ.ನಂ.389/2025

ಡಿ.ಡಬ್ಲೂ-1

ಹೆಸರು ಃ ವಿಮಲಾ ನ್ಯಾಮಗೌಡ

ತಂದೆ ಹೆಸರು ಃ ಬಸಪ್ಪ

ವಯಸ್ಸು ಃ 45 ವರ್ಷ

ಉದ್ಯೋಗ ಃ ಬಿ.ಎಲ್.ಡಿಯಲ್ಲಿ ಆಯಾ ಕೆಲಸ.

ವಾಸ ಸ್ಥಳ ಃ ಸಾವಳಗಿ.

ದಿನಾಂಕಃ 05-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಸಾಕ್ಷಿಯ ಪ್ರಮಾಣ ಪೂರ್ವಕ ಹೇಳಿಕೆ.**

1. ದೂರು ದಾರ ಪರಿಚಯವಿಲ್ಲ ಅವರ ಹೆಂಡತಿ ಭಾರತಿ ಸದಾಶಿವ ಚೌವ್ಹಾನರವರು 2005 ಪರಿಚಯವಿದೆ. ನಾನು ಗ್ರಾಮೀಣ ಜನಸೇವ ಶಿಕ್ಷಣ ಸಂಸ್ಥೆ ಸಾವಳಗಿಯಲ್ಲಿ ಕೆಲಸ ಮಾಡುತ್ತಿದ್ದೇನು. ಆಗ 8-9 ತಿಂಗಳ ನಂತರ ಭಾರತಿರವರು ಸದರಿ ಸಂಸ್ಥೆಯಲ್ಲಿ ಬಂದರು. ಆಗ ನನಗೆ ತಿಂಗಳಿಗೆ 175-00 ರೂಪಾಯಿ ಸಂಬಳ ಮತ್ತು ಭಾರತಿರವರಿಗೆ 175-00 ರೂಪಾಯಿ ತಿಂಗಳಿಗೆ ಸಂಬಳ ಇತ್ತು. ನಾವಿಬ್ಬರೂ ಸೇರಿ ಸುಮಾರು 7 ವರ್ಷ ಕೂಡಿ ಕೆಲಸ ಮಾಡಿದೆವು. ನನ್ನ ಗಂಡ 26-05-2015 ರಂದು ಮೃತಪಟ್ಟರು. ಆಗ ನಾನು ಕೆಲಸ ಬಿಟ್ಟೆನು. ಭಾರತಿರವರು ನಮ್ಮ ಮನೆಗೆ ಯಾವತ್ತು ಬಂದು ಹೋಗುತ್ತಿದ್ದರು. 23-24-12-2025 ರಂದು ಸಾವಳಗಿಯಲ್ಲಿ ಅಯ್ಯಪ್ಪನ ಜಾತ್ರೆ ಇದ್ದು ನಾನು ರಾತ್ರಿ7-30 ರಿಂದ 8-30 ರ ವರೆಗೆ ಹೋಗಿದ್ದು ಆಗ ಭಾರತಿರವರು ನನ್ನ ಬಳಿ ಬಂದು ನನ್ನ ಗಂಡನ ಹೆಸರಿನಲ್ಲಿ ನಿನ್ನ ವಿರುದ್ದ ಕೇಸ ಹಾಕಿದ್ದೇನೆ ಎಂದು ಅವರ ಗಂಡ ಭಾರತಿರವರಿಗೆ ಹೇಳಿದ್ದಾರೆ ಎಂದು ಸದರಿ ಭಾರತಿ ನನಗೆ ಹೇಳಿದರು. ತದನಂತರ ನ್ಯಾಯಾಲಯದಲ್ಲಿ ಕೇಸು ಆಗಿದೆ ಎಂದು ಗೊತ್ತಾಯಿತು.

2. ಭಾರತಿರವರು ಅವರಿಗೆ ಹಣ ಕೂಡಲೇಬೇಕು ಎಂದು ನನಗೆ ಹೇಳಿದರು. ಆದರೆ ನಾನು ಭಾರತಿರವರ ಬಳಿ ಹಣ ಪಡೆದಿರಲಿಲ್ಲ. ನಾನು ದೂರುದಾರರಿಂದ ಯಾವತ್ತು ಹಣ ಪಡೆದಿಲ್ಲ. ಸದರಿ ಜಾತ್ರೆಯಲ್ಲಿ ಭಾರತಿರವರು ನನಗೆ ನಿನ್ನ ವಿರುದ್ದ ಇನ್ನೊಂದು ಸುಳ್ಳು ಚೆಕ್ಕ ಕೇಸ ಹಾಕುತ್ತೇನೆ ನಿನ್ನ ಚೆಕ್ಕಬುಕ್ಕ ನನ್ನ ಬಳಿ ಇದೆ ಸದರಿ ಚೆಕ್ಕ ಬುಕ್ಕನ್ನು ನಾನು ನಿನ್ನ ಮನೆಯಿಂದ ತೆಗೆದುಕೊಂಡು ಬಂದಿದ್ದೇನೆ

ಎಂದು ಹೇಳಿ ನಕ್ಕರು. ಯಾವ ಚೆಕ್ಕ ಎಂದು ನನಗೆ ಗೊತ್ತಿಲ್ಲ. ನನಗೆ ಮತ್ತು ದೂರುದಾರರಿಗೆ ಯಾವುದೇ ವ್ಯವಹಾರ ಆಗಿಲ್ಲ. ದೂರುದಾರರಿಗೆ ಸಾಕಷ್ಟು ಸಾಲ ಇದ್ದು ಅವರು ನನಗೆ ಯಾವುದೇ ಹಣ ಕೊಟ್ಟಿಲ್ಲ. **ಸಾಕ್ಷಿ ತನ್ನ ಗಂಡನ ಮರಣ ಪ್ರಮಾಣ ಪತ್ರ ಹಾಜರಪಡಿಸಿದ್ದು ಅದನ್ನು ನಿಡಿ-3 ಎಂದು ಗುರುತಿಸಲಾಯಿತು.**

**<u>ಪಾಟೀ ಸವಾಲುಃ</u>**

(ದೂರುದಾರ ಪರ ವಕೀಲರು ಸಾಕ್ಷಿಯ ಪಾಟೀ ಸವಾಲಿಗಾಗಿ ಕಾಲವಕಾಶ ಕೋರುತ್ತಾರೆ, ಕಾಲವಾಶ ನೀಡಿ ಪಾಟೀ ಸವಾಲನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಸಾಕ್ಷಿಯ ಸಹಿ

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

ಸಹಿ/-

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಜಮಖಂಡಿ